IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಯು.ಆರ್. ಅನಂತಮೂರ್ತಿ ಅವರ ನಾಲ್ಕು ಕಾದಂಬರಿಗಳ ವೈಶಿಷ್ಟ್ಯತೆಗಳು

ಡಾ. ರೇಖಾ ಜೋಗುಳ,
ಪ್ರಾಚಾರ್ಯರು
ಕಿಟೆಲ್ ಕಲಾ ಮಹಾವಿದ್ಯಾಲಯ, ಧಾರವಾಡ

ಯು.ಆರ್. ಆನಂತಮೂರ್ತಿಯವರು ಕನ್ನಡ, ಭಾರತೀಯ ಹಾಗೂ ಜಾಗತಿಕ ಸಾಹಿತ್ಯ ಸಂದರ್ಭದಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದವರು. ತಮ್ಮ ಬದುಕು ಮತ್ತು ವಿದ್ಯೆಗಳನ್ನು ಸಮನ್ವಯಿಸಿಕೊಂಡು ಅರಿವಿನ ಪಥದಲ್ಲಿ ಬೆಳೆಯುತ್ತಾ ತಮ್ಮೊಳಗೆ ಸಾಹಿತಿಯನ್ನು ರೂಪಿಸಿಕೊಂಡ ಮಾದರಿಯ ಬುದ್ಧಿಜೀವಿ. ಕನ್ನಡದ ಅರಿವು ತಿಳಿವುಗಳನ್ನು ವಿಸ್ತರಿಸಿದ ಮೇರು ಸಾಹಿತಿಗಳ ಸಾಲಿನಲ್ಲಿ ಸದಾ ಕಂಗೊಳಿಸುವಂಥವರು. ರಾಜಕೀಯ ಕಾನೂನು ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ ಆಗುಹೋಗುಗಳನ್ನು ಅವಲೋಕಿಸುತ್ತಾ ಕನ್ನಡ ಸಮಸ್ಯೆಗಳಿಗೆ ಸದಾ ಸಾರ್ವಜನಿಕ ನೆಲೆಯಲ್ಲಿ ಪ್ರತಿಕ್ರಯಿಸುತ್ತಾ ಸಾರ್ವಜನಿಕರಿಗೂ ಹತ್ತಿರವಾದವರು. ಮೂರ್ತಿಯವರು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕಥೆಗಾರರಾಗಿ ಪ್ರವೇಶ ಪಡೆದು ಮೌಲಿಕ ಕಥೆಗಳನ್ನು ನೀಡಿದ್ದರೂ ಕನ್ನಡ ಸಾಹಿತ್ಯ ವಲಯದಲ್ಲಿ ಸಾಂದರ್ಭಿಕವಾಗಿ ಅವರು ಕೃಷಿಗೈದಿರುವ ಇತರೆ ಪ್ರಕಾರಗಳಾದ ಅನುವಾದ ಕಾವ್ಯ ಮುಂತಾದಗಳನ್ನು ಗಮನಾರ್ಹವಾಗಿ ಚರ್ಚೆಗೆ ಎತ್ತಿಕೊಳ್ಳುತ್ತಿದ್ದಾರೆ ಆದರೆ ಕಾದಂಬರಿಕಾರ ವಿಮರ್ಶಕ ಚಿಂತಕರಾಗಿ ಹೆಚ್ಚು ಚರ್ಚೆಗೆ ಒಳಗಾಗುತ್ತಿರುವುದು ಒಂದು ವಿಚಿತ್ರ. ಇದಕ್ಕೆ ಕಾರಣ ಕನ್ನಡ ಕಾದಂಬರಿಗೆ ಹೊಸ ಮುಖವನ್ನು ಕಟ್ಟಿಕೊಟ್ಟ ಪ್ರಯತ್ನವಾದ್ದರಿಂದಲೂ ಆಗಿರಬಹುದು. ಪ್ರಸ್ತುತ ಪ್ರಯತ್ನವು ಸಹ ಅವರ ಆರಂಭದ ನಾಲ್ಕು ಕಾದಂಬರಿಗಳ ಪರಾಮರ್ಶೆಯೊಂದಿಗೆ ಅವರ ಕಾದಂಬರಿಗಳ ವೈಶಿಷ್ಟ್ಯಗಳನ್ನು ಗುರಿತಿಸುವುದಾಗಿದೆ.

ಸಂಸ್ಕಾರ, ಭಾರತೀಪುರ, ಅವಸ್ಥೆ ಹಾಗೂ ಭವ ಇವು ಯು.ಆರ್.ಅನಂತಮೂರ್ತಿಯವರ ಆರಂಭದ ನಾಲ್ಕು ಕಾದಂಬರಿಗಳು. ಈ ನಾಲ್ಕು ಕಾದಂಬರಿಗಳು ದೇಶ ಹಾಗೂ ವಿದೇಶದ ಭಾಷೆಗಳಿಗೂ ಅನುವಾದಗೊಂಡಿವೆ. 'ಸಂಸ್ಕಾರ', 'ಅವಸ್ಥೆ' ಕಾದಂಬರಿಗಳು ಬೆಳ್ಳಿತೆರೆಯನ್ನು ಏರಿವೆ. ಅವರ ಸಂಸ್ಕಾರವನ್ನು ಮೊದಲು ಬೆಳ್ಳಿತೆರೆಗೆ ತರಲು ಕಾರಣರಾದವರು ಪಟ್ಟಾಭಿಯವರು ಎಂಬುದು ಈ ಕಾದಂಬರಿಯ ವಿಶೇಷತೆಯಾಗಿರದೇ ಇರದು. ನಾಲ್ಕು ಕಾದಂಬರಿಗಳು ವಿಮರ್ಶಕ, ಓದುಗರಿಂದ ವಿವಾದಾತ್ಮಕ ಸುಳಿಯಲ್ಲಿ ಸಿಲುಕಿಕೊಂಡಿವೆ. ಅಲ್ಲದೆ ಕನ್ನಡ ಸಾಹಿತ್ಯದ ವ್ಯವಸ್ಥಿತ ಓದು ಮತ್ತು ವಿಮರ್ಶೆಗಳಿಗೆ

ಪರೋಕ್ಷವಾಗಿ ಕಾರಣವಾಗಿವೆ. ಲೇಖಕರ ವ್ಯಕ್ತಿಕೇಂದ್ರಿತ ಆಸಕ್ತಿ ಕ್ರಮೇಣ ವ್ಯಷ್ಟಿಯಿಂದ ಸಮಷ್ಟಿ, ಸಮಷ್ಟಿಯಿಂದ ವ್ಯಷ್ಟಿಯ ಕಡೆಗೆ ಮುಖ ಮಾಡಿದೆ.

ಅನಂತಮೂರ್ತಿಯವರು ತಮ್ಮ ಕಾದಂಬರಿಗಳಲ್ಲಿ ಸಮಾಜದಲ್ಲಿ ವ್ಯಕ್ತಿ ಮತ್ತು ಸಮಾಜದ ಮೌಲ್ಯಗಳನ್ನು ಹಂತ–ಹಂತವಾಗಿ ಪ್ರಶ್ನಿಸುತ್ತ ಬದುಕಿನ ಓರೆಕೋರೆ, ವ್ಯಕ್ತಿಯ ವೈಯಕ್ತಿಕ ಹೋರಾಟ, ಸಮಗ್ರ ಬದುಕಿನ ಸಮಸ್ಯೆಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಕಾದಂಬರಿಗಳಲ್ಲಿ ಜಡ ಮೌಲ್ಯಗಳನ್ನು ಪ್ರಶ್ನಿಸಿ ಹೊಸ ಬದುಕಿಗೆ ದಾರಿ ತೋರಿಸಿರುವುದನ್ನು ಕಾಣಬಹುದು. ಅದೂ ಅಲ್ಲದೆ ಇಲ್ಲಿ ಮೌಲ್ಯ, ಪರಂಪರೆಯ ಪ್ರಶ್ನೆ, ಸಂಘರ್ಷದ ಛಾಯೆಯನ್ನು ಸೆರೆಹಿಡಿದಿರುವುದರೊಂದಿಗೆ ಮೌಢ್ಯ ಮತ್ತು ಅರಿವುಗಳ ಸಂಘರ್ಷವನ್ನು ಪರೋಕ್ಷವಾಗಿ ತೆರೆದಿಡುತ್ತಾರೆ. ಯು. ಆರ್. ಅನಂತಮೂರ್ತಿಯವರ ಸಂಸ್ಕಾರ, ಭಾರತೀಪುರ, ಅವಸ್ಥೆ ಹಾಗೂ ಭವ ಕಾದಂಬರಿಗಳು ಬೇರೆ ಬೇರೆ ಅನಿಸುವುದಿಲ್ಲ. ಒಂದರ ಮುಂದುವರಿಕೆ ಮತ್ತೊಂದಾಗಿ ಬೆಳದು ರೂಪಪಡೆದಿವೆ. ಕಾದಂಬರಿ ನಾಯಕ ಮೊದಲು ತನ್ನ ವೈಯಕ್ತಿಕ ಖಾಸಗಿ ಬದುಕಿನಿಂದ ಹೊರಬಂದು, ಸಾಮಾಜಿಕ ಪರಿಸರದಲ್ಲಿ ಹಾಯ್ದುಹೋಗಿ ರಾಜಕೀಯವನ್ನು ಪ್ರವೇಶಿಸಿ ಕೊನೆಯಲ್ಲಿ ತನ್ನ ಅಸ್ತಿತ್ವದ ಹುಡುಕಾಟದಲ್ಲಿ ತೊಡಗುವನು.

ಅನಂತಮೂರ್ತಿಯವರು ನವ್ಯಮಾರ್ಗದಲ್ಲಿ ಬರೆಯಲಾರಂಭಿಸಿ, ನವ್ಯದೊಂದಿಗೆ ಬೆಳೆದು, ಅದರ ಎಲ್ಲ ಲಕ್ಷಣಗಳನ್ನು ತಮ್ಮ ಕಾದಂಬರಿಗಳಲ್ಲಿ ಸಮರ್ಥವಾಗಿ ಮೂಡಿಸಿದ್ದಾರೆ. ಅವರ ನಾಲ್ಕೂ ಕಾದಂಬರಿಗಳು 'ನವ್ಯ' ಸಾಹಿತ್ಯ ಮಾರ್ಗದಲ್ಲಿನ ಮೈಲುಗಲ್ಲುಗಳು. ಹಾಗಾಗಿ ಅವರು ನವ್ಯದಿಂದ ಪಡೆದದ್ದಕ್ಕಿಂತ ನೀಡಿದ್ದೇ ಹೆಚ್ಚು ಎಂದು ಹೇಳಬಹುದು. ನವ್ಯ ಲಕ್ಷಣಗಳ ಜೊತೆಗೆ ಹೊಸ ಹೊಸ ಆಯಾಮಗಳನ್ನು ತಮ್ಮ ಕಾದಂಬರಿಗಳಲ್ಲಿ ಅಳವಡಿಸಿ, ಅವನ್ನೇ ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಬಳುವಳಿಯಾಗಿ ನೀಡಿದ್ದಾರೆಂದರೆ ತಪ್ಪಾಗಲಾರದು. "ನವ್ಯ ಸಾಹಿತ್ಯ ಅನಂತಮೂರ್ತಿಯವರಿಗೆ ಬರಿಯ ಶೈಲಿಯ ಕ್ರಾಂತಿಯಲ್ಲ. ಜೀವನ ದೃಷ್ಟಿಯ ಕ್ರಾಂತಿ..." ಅನಂತಮೂರ್ತಿಯವರು ನವ್ಯ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದು ಮಾತ್ರವಲ್ಲದೇ ತಮ್ಮ ಕವನ–ಕತೆ–ಕಾದಂಬರಿಗಳಲ್ಲಿಯೂ ಹೊಸ ಆವಿಷ್ಕಾರವನ್ನು ಮಾಡಿದ್ದಾರೆ.

ಅನಂತಮೂರ್ತಿಯವರು ನವ್ಯಮಾರ್ಗದಲ್ಲಿ ಬರೆಯಲಾರಂಭಿಸಿ, ನವ್ಯದೊಂದಿಗೆ ಬೆಳೆದು, ಅದರ ಎಲ್ಲ ಲಕ್ಷಣಗಳನ್ನು ತಮ್ಮ ಕಾದಂಬರಿಗಳಲ್ಲಿ ಸಮರ್ಥವಾಗಿ ಮೂಡಿಸಿದ್ದಾರೆ. ಅವರ ನಾಲ್ಕೂ ಕಾದಂಬರಿಗಳು ಕನ್ನಡ 'ನವ್ಯ' ಸಾಹಿತ್ಯ ಮಾರ್ಗದಲ್ಲಿನ ಮೈಲುಗಲ್ಲುಗಳು, ಹಾಗಾಗಿ ಅವರು ನವ್ಯದಿಂದ ಪಡೆದದ್ದಕ್ಕಿಂತ ನೀಡಿದ್ದೇ ಹೆಚ್ಚು ಎಂದು ಹೇಳಬಹುದು. ನವ್ಯ ಲಕ್ಷಣಗಳ ಜೊತೆಗೆ ಹೊಸ ಹೊಸ ಆಯಾಮಗಳನ್ನು ತಮ್ಮ ಕಾದಂಬರಿಗಳಲ್ಲಿ ಅಳವಡಿಸಿ, ಅವನ್ನೇ ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಬಳುವಳಿಯಾಗಿ ನೀಡಿದ್ದಾರೆ.

**ಸಾಂಕೇತಿಕತೆ :** ಅನಂತಮೂರ್ತಿಯವರ ಕಾದಂಬರಿಗಳಲ್ಲಿ ಮನುಷ್ಯ ಮನಸ್ಸಿನ ಸಹಜತೆಯೇ ಸಂಕೇತವಾಗಿ ಬರುತ್ತದೆ. ಮನಸ್ಸಿನ ಪ್ರತಿಫಲವನ್ನು ಅದರ ಜಟಿಲತೆ ಹಾಗೂ ದ್ವಂದ್ವತೆಗಳಿಂದಾಗಿ ನೇರವಾಗಿ ಹೇಳಲಾಗದೇ ಸಂಕೇತಗಳ ಮೂಲಕ ಸೆರೆಹಿಡಿದಿರುವರು. ಅವರೇ ಹೇಳುವಂತೆ "ನಾನು ವಾಸ್ತವ ಮಾರ್ಗದ ಕಾದಂಬರಿಕಾರನಲ್ಲ; ನನ್ನ ಕೃತಿಯ ಶರೀರ ಸಾಂಕೇತಿಕವಾದದ್ದು..." ಅನಂತಮೂರ್ತಿಯವರ ಕೃತಿಗಳಲ್ಲಿ ಸಂಕೇತಗಳು ಅರ್ಥಪೂರ್ಣವಾಗಿ ಬಳಕೆಯಾಗಿವೆ. ಉದಾ: ಮಣ್ಣಿನ, ಹುಲ್ಲಿನ ವಾಸನೆ, ಪ್ರಾಣೇಶಾಚಾರ್ಯನ ಆತಂಕ ಬೆರೆತ ನಿರೀಕ್ಷೆ, ಕೋಳಿ ಅಂಕ, ದೊಂಬರಾಟ, ಕೃಷ್ಣಪ್ಪ

ಕೊನೆಯಲ್ಲಿ ಬಯಸುವ ಏಕಾಂತತೆ, 'ಭವ'ದಲ್ಲಿ ದಿನಕರ ಅಯ್ಯಪ್ಪನ ಎದುರಿಗೆ ನಿಲ್ಲುವ ಸನ್ನಿವೇಶ ಇವೆಲ್ಲವೂ ವಾಕ್ಯವನ್ನು ಮೀರಿ ನಿಂತು ಸಂದರ್ಭ, ಸನ್ನಿವೇಶವನ್ನು ವಿವರಿಸುವ ಚಿತ್ರಗಳಾಗಿವೆ.

ಅನಂತಮೂರ್ತಿಯವರ ಕಾದಂಬರಿಗಳಲ್ಲಿ 'ಹೋಟೆಲ್' ಆಧುನಿಕತೆಯ ಸಂಕೇತವಾಗಿ ಬರುವುದು. ವ್ಯಕ್ತಿಯು ಮಾನಸಿಕವಾಗಿ ಬದಲಾವಣೆಯಾದಾಗ ಹೋಟೆಲ್ ಪ್ರವೇಶ ಪಡೆಯುವುದು. ಪ್ರಾಣೇಶಾಚಾರ್ಯನ ಹೊಸ ವ್ಯಕ್ತಿತ್ವ ಹೋಟೆಲ್ ಪ್ರವೇಶದ ನಂತರವೇ ನಿರ್ಧಾರದ ರೂಪ ಪಡೆಯುವುದು. ಜಗನ್ನಾಥ ಯೋಜನಾ ಪರ ಪ್ರಗತಿಯನ್ನು ಹೋಟೆಲ್ ಪ್ರವೇಶದ ನಂತರ ಕೈಗೆತ್ತಿಕೊಳ್ಳುವನು. ವಿಶ್ವನಾಥಶಾಸ್ತ್ರಿ ಅಣ್ಣನ ಜೊತೆ ಜಗಳವಾಡಿ ತಾನೇ ಸ್ವತಃ ಹೋಟೆಲು ತೆರೆದು ತನ್ನ ನಿರ್ಧಾರದ ಜೀವನ ಕೈಗೊಳ್ಳುವನು. ಸಾಮಾನ್ಯವಾಗಿ ಅನಂತಮೂರ್ತಿಯವರ ಕಾದಂಬರಿಗಳಲ್ಲಿ 'ಹೋಟೆಲ್' ಆಧುನಿಕತೆಯ ಸಾಂಕೇತಿಕತೆಯನ್ನು ಪಡೆಯುವುದರ ಮೂಲಕ ಪರಿವರ್ತನಾ ಹಂತವನ್ನು ಸೂಚಿಸುತ್ತದೆ.

**ಅಲ್ಪವಿರಾಮದಿಂದ ವಿಸ್ತರಿಸಿಕೊಳ್ಳುವಿಕೆ:** ಅನಂತಮೂರ್ತಿಯವರ ಕಾದಂಬರಿಗಳನ್ನು ಒಂದು ನಿಟ್ಟಿನಲ್ಲಿ ನೋಡಿದಾಗ ಅಪರಿಪೂರ್ಣ. ಅರ್ಧವಿರಾಮವನ್ನು ಹೊಂದಿದ ಕೃತಿಗಳಾಗಿ ಕಂಡುಬರುತ್ತವೆ. ಸಾಹಿತ್ಯ ತಾತ್ವಿಕ ಹಿನ್ನೆಲೆ ರಹಿತ ಓದಿಗೆ ಅತೃಪ್ತಿನೀಡುವಂಥದಾಗಿಬಿಡುತ್ತದೆ. ಬದುಕು ಚಲನಶೀಲ ಇದಕ್ಕೆ ಪೂರ್ಣವಿರಾಮ ಇಲ್ಲವೆಂಬುದನ್ನೇ ಕಾದಂಬರಿಕಾರರು ಕತೆಯ ಮುಂದುವರಿಕೆಯಲ್ಲಿಯೇ ಇದಕ್ಕೆ ಮುಕ್ತಾಯ ಘೋಷಿಸುವರು. ಇದನ್ನೇ ಒಂದು ತಂತ್ರವನ್ನಾಗಿ ಬಳಸಿರುವರು. ಕಾದಂಬರಿಗಳ ಕೊನೆಯಲ್ಲಿ ಯಾವುದೇ ಘರ್ಷಣೆಯನ್ನು ತರದೇ, ಎಳೆದಾಟ ಜಗ್ಗಾಟಗಳಿರದ ನಿರಂತರತೆಯನ್ನು ಉಳಿಸಿಕೊಳ್ಳುವರು. ಪ್ರಾಣೇಶಾಚಾರ್ಯ ಮರಳಿ ಊರಿಗೆ ತೆರಳಿ ಜೀವನ ನಡೆಸ ಬಯಸಿದರೆ, ಜಗನ್ನಾಥ ಮರಳಿ ವಿಫಲಗೊಂಡ ಕ್ರಾಂತಿಯ ಮುಂದಿನ ಹೆಜ್ಜೆಗಳನ್ನು ಗುರುತಿಸುವನು. 'ಅವಸ್ಥೆ'ಯ ಕೃಷ್ಣಪ್ಪ ಅಸೆಂಬ್ಲಿ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಅಶ್ವತ್ಥಮರದ ಬುಡದಲ್ಲಿ ಕುಳಿತು ವಿವಿಧ ಪಕ್ಷಿಗಳನ್ನು ಕಾಣುವಾಸೆ ವ್ಯಕ್ತಗೊಳಿಸುವನು. ದಿನಕರ ಬದುಕಿನ ಬೇರು ಹುಡುಕಿ ಕೊನೆಯಲ್ಲಿ ಹೊಳೆಸ್ನಾನ ಮಾಡಿ ಪ್ರಶಾಂತನಾಗುವನು.

* ಪ್ರತಿ ಕಾದಂಬರಿಯೂ ಮೂರು ಭಾಗಗಳನ್ನು ಒಳಗೊಂಡಿದೆ. ಒಂದು ಹಂತದ ನಂತರ ಇನ್ನೊಂದು ಹಂತವೆಂಬಂತೆ ಮೂರು ಭಾಗಗಳಲ್ಲಿ ಕತೆ ಸಾಗಿದೆ.

* ಅಗ್ರಹಾರದ ಜಟಿಲತೆ, ಜಡತೆ ಕಾದಂಬರಿಗಳ ಒಳಸೇರಿ ಸೀದುಹೋಗಲು ಅವಕಾಶ ಕಲ್ಪಿಸಿಲ್ಲ. ಓದುಗರಿಗೆ ಅಗ್ರಹಾರದ ಸಮಗ್ರ ಪರಿಚಯ ಮಾಡುವ ಹಾಗೂ ಅಗ್ರಹಾರದ ಬದುಕನ್ನು ಸ್ಪಷ್ಟವಾಗಿ ತೋರಿಸುವ ಮೂಲಕ ಅಗ್ರಹಾರದ ಬಗೆಗೆ ಜಿಗುಪ್ಸೆ ಮೂಡುವಂತೆ ಮಾಡುವನು. "...ಜೀವನದ ಅರ್ಥವನ್ನು ಒಟ್ಟಿನಲ್ಲಿ ಶೋಧಿಸಬೇಕು, ಗುರುತಿಸಬೇಕು, ಅರ್ಥೈಸಬೇಕು ಎಂಬ ಘನೋದ್ದಿಶ್ಯ ಅನಂತಮೂರ್ತಿ ಅವರ ನವ್ಯಕಥೆಗಳ ಮೂಲ ಭಿತ್ತಿಯಾಗಿದೆ. ಬ್ರಾಹ್ಮಣ ಕೌಟುಂಬಿಕ ಜೀವನದ ಹಳ್ಳಿಯ ಪರಿಸರದಿಂದ ಹಿಡಿದು ಆಧುನಿಕ ಎನ್ನಬಹುದಾದ ವೈಚಾರಿಕ ನಾಯಕರನ್ನು ಸೃಷ್ಟಿಸುವವರೆಗೆ ಇವರ ಸೃಜನಶೀಲ ಬರವಣಿಗೆಯ ವಿಸ್ತಾರ ಇದೆ...' ಅನಂತಮೂರ್ತಿಯವರು ತಮ್ಮ ಬರವಣಿಗೆ ಹಾಗೂ ಸೃಜನಶೀಲತೆಯ ನಾಡಿ ಮಿಡಿತಗಳನ್ನು ತಮ್ಮ ಪರಿಸರದಿಂದಲೇ ಪಡೆದು ಬಂದಿರುವರು.

* ನಾಯಕರು 'ಮರಳಿ ಮಣ್ಣಿಗೆ' ಬರಲು ಪ್ರಯತ್ನಿಸಿದರೂ ಅಲ್ಲಿ ಅವರ ಜೀವನದ ಕ್ರಮ ಬೇರೆ ರೂಪ ಪಡೆಯುತ್ತದೆ. ಅದರ ಜೊತೆಗೆ ಆಲೋಚಿಸುವ ದೃಷ್ಟಿಯೂ ಭಿನ್ನವಾಗಿರುವದು.

ಅನಂತಮೂರ್ತಿಯವರ ನಾಯಕರು 'ಮರಳಿ ಮನೆಗೆ' ಎಂಬಂತೆ ಮೂಲ ಸ್ಥಳಕ್ಕೆ ಬಂದು ನೆಲೆಸುತ್ತಾರೆ. ಪ್ರಾಣೇಶಾಚಾರ್ಯ ಅಕಸ್ಮಿಕ ಘಟನೆಯಿಂದ ಕಾಲುಕೊಂಡಳ್ಳಿಗೆ ನಡೆದರೂ ತನ್ನ ನಿರ್ಧಾರ ಬದಲಿಸಿ ದೂರ್ವಾಸಪುರಕ್ಕೆ ಮರಳಿ ಅಲ್ಲಿಯೇ ಹೊಸ ಬದುಕು ನಡೆಸಲು ಇಚ್ಛಿಸುವನು. ಇಂಗ್ಲಂಡಿನಲ್ಲಿ ತನ್ನ ಅಸ್ತಿತ್ವಕ್ಕೆ ಧಕ್ಕೆಯಾದಾಗ 'ಭಾರತೀಪುರ'ಕ್ಕೆ ಮರಳಿದ ಜಗನ್ನಾಥ ತನ್ನಯ ಅಸ್ತಿತ್ವದ ನೆಲೆಗಾಗಿ ಹೊಲೆಯರ ದೇವಸ್ಥಾನ ಪ್ರವೇಶ ಕಾರ್ಯಕ್ರಮ ಕೈಗೊಳ್ಳುವನು. ಕೃಷ್ಣಪ್ಪ ಊರಿಂದ ದೂರಾಗಿ ಶಿಕ್ಷಣ, ರಾಜಕೀಯದಲ್ಲಿ ಉನ್ನತ ಸ್ಥಾನ ಪಡೆದಾಗಲೂ ಭ್ರಷ್ಟತೆಯ ವಿಸ್ತೃತರೂಪ ಕಂಡು ಜಿಗುಪ್ಸೆಯಿಂದ ಪುನಃ ದನಕಾಯುವ ಅರಳಿಮರದ ಏಕಾಂತವನ್ನು ಬಯಸಿ ಹಳ್ಳಿಗೆ ಬರಲು ಬಯಸುವನು. ವಿಶ್ವನಾಥ ಶಾಸ್ತ್ರಿ ಆಸ್ತಿಯನ್ನು ಪಡೆದು ಬೊಂಬಾಯಿಗೆ ಹೋದರೂ ಆತನ ಅಣ್ಣನ ಆಕಸ್ಮಿಕ ಮರಣ, ಆಸ್ತಿಯ ಜವಾಬ್ದಾರಿತನ ಆತನನ್ನು ಹಳ್ಳಿಯಲ್ಲಿಯೇ ಉಳಿಯುವಂತೆ ಮಾಡುತ್ತದೆ. ತನ್ನ ಹೆಸರನ್ನೇ ಕಳೆದುಕೊಳ್ಳಲು ನಿರ್ಧರಿಸಿದ ದಿನಕರ ಆಕಸ್ಮಿಕವಾಗಿ ಸೀತಮ್ಮ ಗಂಗೂರಲ್ಲಿಗೆ ಬಂದರೂ ಆತನ ಮೂಲ ಭೂಮಿಯ ಸಮೀಪದಲ್ಲಿಯೇ ಆತ ತೊಂದರೆಯಿಂದ, ಭವದಿಂದ ಮುಕ್ತನಾಗಲು ಸಹಾಯಕನಾಗಿ ಪ್ರಸಾದ ದೊರೆಯುವನು. ಅನಂತಮೂರ್ತಿಯವರು ಕಾದಂಬರಿ ವಸ್ತುವನ್ನು ಪ್ರಗತಿ ಪಥದಲ್ಲಿ ಮುನ್ನಡೆಸಿದರೂ ಮೂಲ ಬೇರಿನ, ಮಣ್ಣಿನ ಸ್ವಾದದ ಉತ್ಕೃಷ್ಟತೆಯನ್ನು ಮೆರೆಸಿ, ಕಸಿಗಿಂತ ಮೂಲ ಬೇರಿನಲ್ಲಿ ಬೆಳೆದ ಗಿಡಕ್ಕೆ ಪ್ರಾಮುಖ್ಯತೆ ನೀಡುವರು. ಇದರಿಂದ "ನಡೆಯುತ್ತ ನೇರ ಮುಂದ ಮುಂದಕ್ಕೆ ಹೋಗುವುದಲ್ಲ. ಪುನಃ ಪುನಃ ಹಳೆಯದಕ್ಕೆ ಮರಳಿಕೆ, ಮರಳಿಕೆ ಯಾತಕ್ಕೆಂದರೆ ಮತ್ತೆ ಹೊಸದಕ್ಕೆ ಲಂಘಿಸಿಕೊಳ್ಳಲಿಕ್ಕೆ ಹಳೆಯದರಿಂದ ಅದೇನನ್ನೋ ಮೈಗೂಡಿಸಿಕೊಂಡು, ಹೊಸದರಲ್ಲಿನ ಏನೇನನ್ನೋ ಉದುರಿಸಿ ಹಾಕಿ ಪುನಃ ಇನ್ನೊಂದೇ ಹೊಸ ಯಾತ್ರೆ ಪ್ರಾರಂಭಿಸಲಿಕ್ಕೆ ಈ ವೃತ್ತ ಯಾತ್ರೆಗಳ ಸರಣಿಸರಣಿಗಳಲ್ಲಿ ಹಳತು ಹೊಸತು ಕಲಸಿಕೊಂಡು ಹೋಗುತ್ತವೆ." ಕೆ.ವಿ. ಸುಬ್ಬಣ್ಣನವರು ನಾಯಕರ ಮರಳುವಿಕೆಯನ್ನು ಅರ್ಥಪೂರ್ಣವಾಗಿ ವಿವರಿಸಿರುವರು.

* ಕಾದಂಬರಿಗಳಲ್ಲಿ ಬ್ರಾಹ್ಮಣ-ಶೂದ್ರರ ಒಂದಾಗಿಸುವಿಕೆಯ ಪ್ರಯತ್ನ ನಡೆದಿದೆ. ಭೋಗಕ್ಕಾಗಿ ಬೇಕಾದ ವರ್ಗ ಮುಂದೆ ಬಳಕೆ, ವ್ಯವಹಾರಗಳಲ್ಲಿ ಬೆಳೆದು ಬರಲಿ, ಬೆಳೆದು ನಿಲ್ಲಲಿ ಎಂಬ ಆಶಯ ಕಾದಂಬರಿಗಳುದ್ದಕ್ಕೂ ಮೂಡಿಬಂದಿದೆ.

**ಹಿಮ್ಮಿಂಚು (ಈಟಚಿಛಿ ಃಚಿಛಿಞ) ಈ ಕಾದಂಬರಿಗಳ ತಾಂತ್ರಿಕತೆಯಾಗಿದೆ:** ನಾರಣಪ್ಪನ ಮರಣದಿಂದ ಪ್ರಾರಂಭವಾಗುವ 'ಸಂಸ್ಕಾರ' ಹಿಂದಿನ ಘಟನೆಗಳ ನೆನಪಿನೊಡನೆ ಮುಂದೆ ಸಾಗುವುದು. ಜಗನ್ನಾಥರ ಇಂಗ್ಲಂಡ್ ಘಟನೆಗಳೊಡನೆ ಮುಂದಿನ ಘಟನೆಗಳು ನೆರವೇರುವವು. ರೋಗಪೀಡಿತ ಕೃಷ್ಣಪ್ಪನ ಹಿಂದಿನ ಜೀವನದ ಘಟನೆಗಳೊಡನೆ ಮುಂದಿನ ರಾಜಕೀಯ ಚಟುವಟಿಕೆಗಳ ಚಿತ್ರ ಬರುವುದು. ಪ್ರಯಾಣ ಮುಂದುವರೆದರೂ ವಿಶ್ವನಾಥಶಾಸ್ತ್ರಿ ತಾಯಿತದ ನೆನಪಿನೊಡನೆ ಹಿಂದಿನ ಜೀವನದ ಘಟನೆಗಳಲ್ಲಿ ತೇಲಿ ಹೋಗುವನು.

**ಮೇಲ್ವರ್ಗಕ್ಕೆ ಪ್ರಾಧಾನ್ಯತೆ ನೀಡಲಾಗಿದೆ:** ಕಾದಂಬರಿಗಳಲ್ಲಿ ಬ್ರಾಹ್ಮಣ ಸಮಾಜ ಪ್ರಧಾನವಾಗಿ ಬರುವುದು. ಲೇಖಕರು ಅದೇ ಪರಿಸರದಿಮದ ಬಂದ ಕಾರಣ ಅಲ್ಲಿಯ ಸಂವೇದನೆ ಮತ್ತು ಅನುಭವಗಳು ದಟ್ಟವಾಗಿ ಆವರಿಸಿಕೊಂಡಿವೆ. ಆಧುನಿಕ ನಾಗರಿಕತೆಯ ಹಿನ್ನೆಲೆಯಲ್ಲಿ ಅನಂತಮೂರ್ತಿಯವರ ಕಾದಂಬರಿಯಲ್ಲಿ ವಿಭಕ್ತ ಕುಟುಂಬವನ್ನು ಕಾಣುತ್ತೇವೆಯೇ ಹೊರತು ಅವಿಭಕ್ತ ಕುಟುಂಬವನ್ನಲ್ಲ. ಸಂಪ್ರದಾಯ ಮೇಲುಗೈ ಸಾಧಿಸಿರುವುದರಿಂದ ಮೇಲ್ವರ್ಗದ ಸ್ತ್ರೀಗೆ ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯವಿರದೇ ಹೋಗಿರುವುದು. ನಿಮ್ನ ವರ್ಗದ ಸ್ತ್ರೀ ಸಾಮಾಜಿಕವಾಗಿ ಹತ್ತಿಕ್ಕಲ್ಪಟ್ಟರೂ ಆರ್ಥಿಕ ಸ್ವಾವಲಂಬನೆಯನ್ನು ಹೊಂದಿರುವಳು. ಮೇಲ್ವರ್ಗದ ಪುರುಷರು ಶಿಕ್ಷಣವನ್ನು ಹೊಂದಿದ್ದರೆ ನಿಮ್ನರು ಶಿಕ್ಷಣದಿಂದ ವಂಚಿತರಾಗಿಯೇ ಇದ್ದಾರೆ.

ಮೇಲ್ವರ್ಗದ ಸ್ತ್ರೀಯ ವೈಚಾರಿಕತೆಗೆ ಲೇಖಕರು ಸ್ವಾತಂತ್ರ್ಯ ಕೊಟ್ಟಿರುವರು. ನಿಮ್ನ ವರ್ಗದ ಸ್ತ್ರೀಯರಲ್ಲಿ ಸ್ವತಂತ್ರವಾಗಿ, ಸ್ವಾವಲಂಬಿಯಾಗಿ ನಿಂತದ್ದು 'ಭವ'ದ ಗಂಗೂ ಮಾತ್ರ. ಅವಳೂ ಮೇಲ್ವರ್ಗದ ಪರಿಧಿಯ ಪ್ರಭಾವದಲ್ಲಿಯೇ ಇದ್ದವಳು.

**ಬೆಳೆದು ಬರುವ ಪಾತ್ರಗಳಿಗಿಂತ ಬೆಳೆದ ಪಾತ್ರಗಳೇ ಹೆಚ್ಚು:** ನಾಯಕರೇ ಪ್ರಮುಖರಾಗಿ ಉಳಿದ ಪಾತ್ರಗಳು ಆ ಕೇಂದ್ರ ಪಾತ್ರದ ಸುತ್ತ ಸುತ್ತುತ್ತವೆ. ಇಲ್ಲಿ ನಾಯಕ ಒಂದೊಂದು ರೀತಿಯಲ್ಲಿ ಹೋರಾಟಕ್ಕೆ ವೈಯಕ್ತಿಕವಾಗಿ ಕಾಲಿಟ್ಟರೂ ಲೇಖಕರು ಆ ಪರಿಸರದಲ್ಲಿ ಸೂಕ್ಷ್ಮಮಂದಗತಿಯ ಬದಲಾವಣೆಯನ್ನು ಮೊದಲೇ ತಂದು ತೀವ್ರಗತಿಯಲ್ಲಿ ಮಾತ್ರ ನಾಯಕ ಕಂಡುಬರುವನು. ಪ್ರಾಣೇಶಾಚಾರ್ಯನಲ್ಲಿ ಆದ ವೈಯಕ್ತಿಕ ಕ್ರಾಂತಿ, ಅಂತಹ ಪರಿಸರ ಆಚಾರ್ಯನಂತೆ ಅಭಿರುಚಿ ಹೊಂದಿದ ಮಹಾಬಲನಲ್ಲಿ ಆಗಿದೆ. ಮಹಾಬಲ ಒಂದು ಸ್ಥಿರ ಹಂತದಲ್ಲಿ ನಿಂತಿರುವಾಗ ಪ್ರಾಣೇಶಾಚಾರ್ಯ ಇನ್ನೂ ದ್ವಂದ್ವದಲ್ಲಿಯೇ ಉಳಿದಿರುವನು. 'ಭಾರತೀಪುರ'ದಲ್ಲಿ ಜಗನ್ನಾಥನ ಕ್ರಾಂತಿಯ ಸೂಕ್ಷ್ಮಕಿಡಿಯನ್ನು ಶ್ರೀಪತಿರಾಯ ಮತ್ತು ಸಮಾಜಕ್ಕೆ ಸೆಟೆದು ನಿಂತು ವಿಫಲರಾದ ಪುರಾಣಿಕರಲ್ಲಿ ಗುರುತಿಸಬಹುದು. ಮುಂದೆ ಇವರಿಬ್ಬರ ಪ್ರತಿನಿಧಿಯಾಗಿ ಜಗನ್ನಾಥ ಬರುವನು. 'ಅವಸ್ಥೆ'ಯಲ್ಲಿ ಕೃಷ್ಣಪ್ಪ ಮಹೇಶ್ವರಯ್ಯ, ಭೈರಾಗಿ, ಅಣ್ಣಾಜಿಯ ಪ್ರಭಾವವಲಯದ ಪ್ರತೀಕ. 'ಭವ'ದಲ್ಲಿ ಪ್ರಸಾದ, ವಿಶ್ವನಾಥಶಾಸ್ತ್ರಿ, ದಿನಕರರ ತೊಳಲಾಟವನ್ನೇ ಮೀರಿ ನಿಲ್ಲುವನು. ಹೀಗಾಗಿ ಕಾದಂಬರಿಯಲ್ಲಿ ಎರಡು ಹಂತದ ಬೆಳವಣಿಗೆಯ ಕ್ರಮ ಕಾಣಬಹುದು. ಬೆಳೆದು ನಿಂತ ಪಾತ್ರಗಳು, ಬೆಳೆಯುತ್ತಿರುವ ಪಾತ್ರಗಳು.

**ಹಳೆಯದರಲ್ಲಿ ಹೊಸ ತೇಜಸ್ಸನ್ನು ಹೊಮ್ಮಿಸುವ ಕಳಕಳಿ:** "ಜೀವನದ ಅರ್ಥ, ಮೌಲ್ಯಗಳ ಶೋಧನೆ ಮತ್ತು ಹಳೆಯ ಸಂಸ್ಕೃತಿಯಲ್ಲಿ ಹೊಸದನ್ನು ಹುಡುಕುವಿಕೆ ಮುಂತಾದ ಮಹತ್ವಾಕಾಂಕ್ಷೆಯ ಕೇಂದ್ರವೇ ಅನಂತಮೂರ್ತಿಯವರ ಕಥೆಗಳ ಮೂಲಭಿತ್ತಿ..." ಕೇವಲ ಈ ಮಾತುಗಳು ಅನಂತಮೂರ್ತಿಯವರ ಕತೆಗಳಿಗೆ ಮಾತ್ರ ಸಂಬಂಧಿಸದೇ ಕಾದಂಬರಿಗಳಿಗೂ ಅನ್ವಯಿಸುತ್ತವೆ. ಅನಂತಮೂರ್ತಿಯವರು ನಮ್ಮ ಸಂಸ್ಕೃತಿಯ ಪರಂಪರಾಗತ ಮೌಲ್ಯದ ಶೋಧನೆಗೆ ಬ್ರಾಹ್ಮಣ ಪರಿಸರ ಎತ್ತಿಕೊಂಡರೂ ನಂತರದಲ್ಲಿ ರಾಜಕೀಯವಲಯ, ಸಾಮಾಜಿಕ ಸಮಸ್ಯೆಯ ಕಡೆಗೂ ತಮ್ಮ ದೃಷ್ಟಿಯನ್ನು ಹರಿಸಿದ್ದಾರೆ. ಪ್ರತಿ ಕಾದಂಬರಿಯಲ್ಲಿ ಪರೀಕ್ಷಿಸುವ, ಶೋಧಿಸುವ ಮೌಲ್ಯಗಳು ಸಾರ್ವತ್ರಿಕತೆಗಿಂತ ಭಿನ್ನವಾಗಿ ಸುಶಿಕ್ಷಿತರಲ್ಲಿ ಅಪಮೌಲ್ಯ ಪಡೆದಿವೆ. ಸುಶಿಕ್ಷಿತರಿಗೆ ಗಮನ ನೀಡಿ ಲೇಖಕರು ಕ್ರಾಂತಿ ಎಲ್ಲೆಡೆ ಅವರಿಂದ ಹರಡಿ ಅದು ವಿಫಲತೆ ಹೊಂದಿದರೂ ಕ್ರಾಂತಿಯ ಕಿಡಿಯ ಬೆಳಕನ್ನು ಕಾದಂಬರಿಯಲ್ಲಿ ತಂದು ಹೊಸತನದ ಮಿಂಚನ್ನು ಮಿನುಗಿಸಿರುವರು.

* ಅನಂತಮೂರ್ತಿಯವರು ತಮ್ಮ ಕಾದಂಬರಿಗಳಲ್ಲಿ ಪರಂಪರಾಗತ ಮೌಲ್ಯ ಶೋಧಿಸುವರು. ಪರೀಕ್ಷಿಸಿ ತಮ್ಮದೇ ಆದ ಹೊಸ ಜಗತ್ತನ್ನು ಕೊಡುವರು, ತರುವರು. ಯಾವುದೇ ಚೌಕಟ್ಟಿಗೆ ಆತುಕೊಳ್ಳದೇ ಸಂಪ್ರದಾಯವನ್ನು ಮುರಿದು ಅನುಮಾನ, ದ್ವಂದ್ವಗಳಲ್ಲಿ ಕಾದಂಬರಿಯನ್ನು ಮುನ್ನಡೆಸಿಕೊಂಡು ಹೋಗುವುದರಿಂದ ಒಂದಕ್ಕಿಂತ ಹೆಚ್ಚಿನ ಸಾಧ್ಯತೆಗಳನ್ನು ಗ್ರಹಿಸಬಹುದಾಗಿದೆ. ಕಾದಂಬರಿಯಲ್ಲಿ ಬದುಕನ್ನು ಕೇವಲ ವೈಯಕ್ತಿಕ ಸ್ತರದಲ್ಲಿಟ್ಟು ನೋಡದೆ ಸಾಮಾಜಿಕ, ಸಾಂಸ್ಕೃತಿಕ ಮೇರೆಗಳಲ್ಲಿಟ್ಟು ನೋಡುವರು. ಕಾದಂಬರಿಯಲ್ಲಿ ಬೌದ್ಧಿಕ, ವೈಚಾರಿಕ ಪಾತಾಳಿಯನ್ನು ಕಾಣಬಹುದು. ಬದುಕಿನ ಅರ್ಥವನ್ನು ಕಾಣಲು ತಮಗೆ ಬೇಕಾದ ರೀತಿಯಲ್ಲಿ ಪಾತ್ರಗಳನ್ನು ಬಗ್ಗಿಸಿದ್ದಾರೆ. ಕೆಲವೆಡೆ ಒತ್ತಾಯಪೂರ್ವಕವಾಗಿ ನಡೆಸಿದ್ದಾರೆ. ಇನ್ನೂ ಕೆಲವೆಡೆ ಅರ್ಥ ಕಾಣದೇ ಗೊಂದಲದಲ್ಲಿಯೂ ಬಿದ್ದಿದ್ದಾರೆ.

* "ಅನಂತಮೂರ್ತಿಯವರಿಗೆ ಬರೆಯುವುದೆಂದರೆ ಹುಡುಕುವುದು. ಒಂದನ್ನೊಂದಕ್ಕೆ ತಾಳಿಸಿ, ಮೇಳಿಸಿ, ತಡಕಾಡಿ ಹುಡುಕುವುದು, ಅನಂತತೆಯನ್ನು ಕಾಣಿಸುವುದು. ಹಾಗೆಂದರೆ ಏನನ್ನೂ ಅವಸರದಲ್ಲಿ ಓದುಗರತ್ತ ಎಸೆಯಲಾರದ, ತನ್ನ

ಸೃಷ್ಟಿ ಕರ್ಮದ ಬಗ್ಗೆ ಸಂಪೂರ್ಣವಾದ ನಿಷ್ಠೆ; ಮಾತುಗಳಲ್ಲಿ ರೂಪ ಕೊಡುವಾಗ ಸಾಮಾಜಿಕ, ಆರ್ಥಿಕ ಪ್ರಭಾವ ಲೆಕ್ಕಿಸದ, ಕಲೆಯನ್ನು ಕುರಿತ ಅಪಾರವಾದ ಗೌರವ..." ಲಂಕೇಶರು ಗುರುತಿಸಿದ ಅನಂತಮೂರ್ತಿಯವರ ಬರಹದ ಈ ವೈಶಿಷ್ಟ್ಯ ಕಾದಂಬರಿಗಳಿಗೂ ಅಲ್ಲಿರುವ ಶೈಲಿಗೂ ಅನ್ವಯಿಸಿ ನಿಲ್ಲುವ ಜೊತೆಗೆ ಅವರ ಬರಹದ ಉತ್ಕೃಷ್ಟತೆಗೆ ಸಾಕ್ಷಿಯನ್ನೊದಗಿಸುತ್ತದೆ.

* ಯಾವುದೇ ಕೃತಿ ನಮ್ಮ ಅರಿವನ್ನು, ವಿಚಾರ, ಚಿಂತನೆಯನ್ನು ವಿಸ್ತರಿಸಬೇಕು, ಮುಂದುವರಿಸಬೇಕು. ಅನಂತಮೂರ್ತಿಯವರ ಕಾದಂಬರಿಗಳು ಯಾವುದನ್ನೂ ಪ್ರತಿಪಾದಿಸದೇ ಓದುಗನ ಮೇಲೆ ಏನನ್ನೂ ಹೇರದೇ ಹೋಗುವ ಅವರ ರೀತಿ, ಶೈಲಿ ವಿಶಿಷ್ಟವಾಗಿದೆ. ಓದುಗ ತನ್ನಿಂದ ತಾನೇ ಸ್ವೀಕರಿಸಿ ಇಲ್ಲಿ ಮುಂದುವರೆಯುವನು. ಪರಸ್ಪರ ವಿರುದ್ಧ ಧೋರಣೆಯಿಂದ, ದ್ವಂದ್ವತೆಯಿಂದ ಪಾತ್ರಗಳನ್ನು ಎದುರು ಬದರಾಗಿ ಕುಸ್ತಿಪಟುಗಳಂತೆ ಹುರಿದುಂಬಿಸುತ್ತ ನಡೆಯುತ್ತ ಕೊನೆಯಲ್ಲಿ ಜಯ ಯಾರಿಗೆ? ಸೋಲು ಯಾರಿಗೆ? ಎಂಬ ಉತ್ಸಾಹ, ಕುತೂಹಲದಲ್ಲಿಯೇ ಕತೆ ಸಾಗುವುದು.

ಉದಾ: ಪ್ರಾಣೇಶಾಚಾರ್ಯ – ನಾರಣಪ್ಪ

ಜಗನ್ನಾಥ – ಭಾರತೀಪುರದವರು

ಕೃಷ್ಣಪ್ಪ – ಇತರ ರಾಜಕಾರಣಿಗಳು

ಅನಂತಮೂರ್ತಿಯವರೇ ಹೇಳುವಂತೆ "...ನಾವು ಬದುಕುತ್ತಿರುವ ಈ ಪರ್ವಕಾಲದಲ್ಲಿ ಬದಲಾಗುತ್ತಿರುವ ಬಾಹ್ಯ ಪ್ರಪಂಚ ಮತ್ತು ತತ್ಪರಿಣಾಮವಾಗಿ ಸಂಘರ್ಷಕ್ಕೆ ಸಿಕ್ಕ ಮನುಷ್ಯನ ಮನಸ್ಸು ಎರಡನ್ನೂ ಒಟ್ಟಿಗೆ ಸೃಷ್ಟಿಸಬಲ್ಲ ಲೇಖಕ ಮಾತ್ರ ನಮ್ಮ ಕಾದಂಬರಿಲೋಕದಲ್ಲಿ ಹೊಸತನ್ನು ಸಾಧಿಸಬಲ್ಲ." ಕೇವಲ ಮಾತಿನಲ್ಲಿಯೇ ಹೇಳಿ ಮುಗಿಸದೇ ಅವುಗಳನ್ನು ತಮ್ಮ ಕೃತಿಗಳಿಗೂ ಭಟ್ಟಿ ಇಳಿಸಿ ಕಾದಂಬರಿ ಕ್ಷೇತ್ರದಲ್ಲಿ ತಮ್ಮ ಹೆಸರನ್ನು ಸ್ಥಿರಗೊಳಿಸಿಕೊಂಡಿದ್ದಾರೆ.

ಕನ್ನಡ ಕಾದಂಬರಿ ಲೋಕದಲ್ಲಿ ಅನಂತಮೂರ್ತಿಯವರದು ಅಚ್ಚಳಿಯದ ಹೆಸರು. ಅವರು ಬರೆದ ಕಾದಂಬರಿಗಳು ಸಂಖ್ಯೆಯಲ್ಲಿ ಕಡಿಮೆಯಾಗಿವೆಯಾದರೂ ಸಾರುವ ಸಂದೇಶದಲ್ಲಿ, ಸಾಮಾಜಿಕ ಕಾಳಜಿಯಲ್ಲಿ, ಬರವಣಿಗೆಯ ಶೈಲಿಯಲ್ಲಿ ಅಗ್ರಸ್ಥಾನ ಪಡೆದುಕೊಂಡಿವೆ. ಇದಕ್ಕೆ ಅವುಗಳ ಪರ ಹಾಗೂ ವಿರೋಧವಾಗಿ ಬಂದ ಚರ್ಚೆ, ವಾದ–ವಿವಾದಗಳೇ ಸಾಕ್ಷಿ. ಪ್ರಕಟವಾದಂದಿನಿಂದ ಪ್ರತಿ ಕಾದಂಬರಿಯು ಒಂದಿಲ್ಲೊಂದು ವಿವಾದದಲ್ಲಿ ಸಿಲುಕಿಹಾಕಿಕೊಂಡು, ಅಷ್ಟೇ ಸಲೀಸಾಗಿ ಆ ಎಲ್ಲ ವಿವಾದಗಳನ್ನು ಜಯಿಸಿ ಜಗತ್ತಿನಾದ್ಯಂತ ಓದುಗರ ಬಳಗವನ್ನು ಗಳಿಸಿಕೊಂಡಿದೆ. 'ಸಂಸ್ಕಾರ' ಕಾದಂಬರಿಯಂತೂ ಭಾಷಾಂತರವಾಗದ ಜಗತ್ತಿನ ಪ್ರಮುಖ ಭಾಷೆಯೇ ಇಲ್ಲವೆನ್ನಬಹುದು. ಹೀಗೆ ಕನ್ನಡ ಜನರ ಬದುಕಿನ ವೈವಿಧ್ಯತೆಯನ್ನು ಸಾಂಸ್ಕೃತಿಕ, ಸಾಮಾಜಿಕ ಪರಿಸರವನ್ನು ಅವರ ಜೀವನೋದ್ದೇಶವನ್ನು ಕನ್ನಡ ಕಾದಂಬರಿಯ ಸೊಗಡನ್ನು ಸಪ್ತಸಾಗರಗಳಾಚೆ ಕೊಂಡೊಯ್ದು ಕನ್ನಡ ಸಾಹಿತ್ಯಕ್ಕೆ ಚಿರಸ್ಥಾಯಿ ಸ್ಥಾನವನ್ನು ಅನಂತಮೂರ್ತಿಯವರು ಗಳಿಸಿಕೊಟ್ಟರೆನ್ನಬಹುದು. ಸಾಮಾಜಿಕ ಆಂದೋಲನವನ್ನು ಕಾದಂಬರಿಯ ವಸ್ತುವನ್ನಾಗಿ ಆಯ್ದುಕೊಂಡವರಲ್ಲಿ ಅನಂತಮೂರ್ತಿಯವರು ಪ್ರಮುಖರು. ನೀರಸವಾಗಿರಬೇಕಾಗಿದ್ದ ವಿಷಯವಸ್ತು, ಅನಂತಮೂರ್ತಿಯವರ ಕೈಯಲ್ಲಿ ಒಂದು ಹೊಸ ರೂಪವನ್ನು ಪಡೆದು ಕನ್ನಡ ಸಾಹಿತ್ಯಲೋಕಕ್ಕೆ ಮಾದರಿಯಾಗಿ ಹೊರಹೊಮ್ಮಿತು. ಅವರ ಬರವಣಿಗೆಯ ಶೈಲಿ ಹಾಗೂ ವಿಷಯ ನಿರೂಪಣೆಗಳು ಮಿಂಚಿನ ಸಂಚಾರವನ್ನುಂಟುಮಾಡಿ ಕನ್ನಡ ಕಾದಂಬರಿ ಸಾಹಿತ್ಯಕ್ಕೆ ಒಂದು ಹೊಸ ಆಯಾಮವನ್ನು ಹಾಗೂ ಹೊಸ ದಿಕ್ಕನ್ನು ತೋರಿಸಿದವು. ಪಾಶ್ಚಾತ್ಯ ಸಾಹಿತಿಗಳಾದ ಲಾರೆನ್ಸ್, ಕಾಮೂರ್

ವಿಚಾರಧಾರೆಗಳನ್ನು ಅಳವಡಿಸಿಕೊಂಡು ಪಾಶ್ಚಾತ್ಯ ಸಾಹಿತ್ಯದಲ್ಲಿ ಸ್ವೇಚ್ಛಾ ಮನೋಭೂಮಿಕೆಯನ್ನು, ಲೈಂಗಿಕ ಸ್ವಚ್ಛಂದವನ್ನು ಕನ್ನಡಕ್ಕೆ ಒದಗಿಸಿದವರು ಅನಂತಮೂರ್ತಿಯವರು.

ಇಂಗ್ಲೀಷ್‌ನಲ್ಲಿ ಲಾರೆನ್ಸ ಮಾಡಿದುದನ್ನೇ ಕನ್ನಡದಲ್ಲಿ ಅನಂತಮೂರ್ತಿಯವರು ಕೈಕೊಂಡರು. ಲೈಂಗಿಕ ಸ್ವಚ್ಛಂದವನ್ನು ತಮ್ಮ ಕಾದಂಬರಿಗಳಲ್ಲಿ ಆಳವಾಗಿ ಪರೀಕ್ಷೆಗೊಳಪಡಿಸುವುದರ ಮೂಲಕ ಕನ್ನಡ ಓದುಗರಲ್ಲಿ ದಿಗ್ಭ್ರಮೆ ಹಾಗೂ ರೋಮಾಂಚನ ಮೂಡಿಸಿದರು. ಮೇಲ್ನೋಟಕ್ಕೆ ಅವರ ಕತೆಗಳು ಮತ್ತು ಪಾತ್ರಗಳು ಸಮಕಾಲೀನ ಸಮಾಜದಲ್ಲಿ ನೆಲೆಗೊಂಡಿವೆಯೆಂದು ಕಂಡುಬಂದರೂ, ಅವು ನಿಜವಾಗಿ ಮನುಷ್ಯನ ಮನಸ್ಸಿನಲ್ಲಿ ರಂಗಪ್ರವೇಶ ಮಾಡುತ್ತವೆ. ಲೈಂಗಿಕ ವಿಷಯಕ್ಕೆ ಸಂಬಂಧಿಸಿದಂತೆ ಮನುಷ್ಯನ ಆಶೆ, ನಿರಾಶೆ, ಹತಾಶೆ ಮತ್ತು ಅವುಗಳಿಂದುಂಟಾಗುವ ಭಯ, ಆತಂಕ, ದಿಗ್ಭ್ರಮೆ ಎಲ್ಲವನ್ನೂ ಎಳೆ ಎಳೆಯಾಗಿ ಬಿಡಿಸಿಟ್ಟರು. ಹಾಗಾಗಿ ಅನಂತಮೂರ್ತಿಯವರದು ಬರೀ ಲಾರೆನ್ಸ್‌ನ ಅನುಕರಣೆಯೆಂದು ಹೇಳುವವರೂ ಇದ್ದಾರೆ. ಆದರೆ, ಅದು ನಿಜವಲ್ಲ. ಪಾಶ್ಚಾತ್ಯ ಸಾಹಿತ್ಯದ ಆಯಾಮಗಳನ್ನು ಕನ್ನಡಕ್ಕೆ, ಕನ್ನಡ ಮನಸ್ಸಿಗೆ ಹೊಂದುವಂತೆ ಪರಿವರ್ತಿಸಿಕೊಂಡು ತಮ್ಮ ಮಿತಿಯೊಳಗೆ ಮುನ್ನಡೆದು ಹೊಸದೊಂದು ಸಾಧ್ಯತೆಯನ್ನು ತೋರಿಸಿಕೊಟ್ಟರು. ಹೀಗೆ, ಮಾನವನ ಮನಸ್ಸಿನ ಸಹಜ ಒಳತುಡಿತಗಳನ್ನು, ಸಾರ್ವಕಾಲಿಕ ಸತ್ಯಗಳನ್ನು ಅವರು ಸೆರೆಹಿಡಿದಿರುವುದರಿಂದ ಅವರ ಕಾದಂಬರಿಗಳು ಇಂದಿನ ಜಾಗತೀಕರಣದ ಯುಗದಲ್ಲೂ ತಮ್ಮ ಪ್ರಸ್ತುತತೆಯನ್ನು ಪ್ರಕಟಪಡಿಸುತ್ತವೆಯೆಂಬುದನ್ನು ಈ ಘಟ್ಟದಲ್ಲಿ ನೆನಪಿಸಿಕೊಳ್ಳಬಹುದು.

ಕಾದಂಬರಿಕಾರರಾಗಿ ಮಾತ್ರವಲ್ಲದೇ ಅನಂತಮೂರ್ತಿಯವರು ಸಾಹಿತ್ಯದ ಇತರ ಪ್ರಕಾರಗಳ ಕಡೆಗೂ ಒಲವು ಹರಿಸಿ, ಕೇವಲ ತಮ್ಮ ಸಾಹಿತ್ಯಕ್ಕೆ ಸೀಮಿತರಾಗಿ ನಿಲ್ಲದೆ ಇತರ ಸಾಹಿತ್ಯಕ್ಕೂ ಸ್ಪಂದಿಸಿದ್ದಾರೆ. ಕೇವಲ ಸಾಹಿತ್ಯ ಕ್ಷೇತ್ರಕ್ಕೆ ಸೀಮಿತರಾಗದೆ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಕಾರಣಗಳಿಗೂ ಪ್ರತಿಕ್ರಿಯಿಸುತ್ತಿದ್ದಾರೆ. "ಅನಂತಮೂರ್ತಿಯವರ ಒಂದು ಗುಣವೆಂದರೆ ಅವರು ಸಾಹಿತ್ಯ, ವಿಮರ್ಶೆ, ಕತೆ, ಕಾದಂಬರಿ, ವೇದಿಕೆಯ ಮೇಲೆ ಭಾಷಣ ಏನೇ ಮಾಡಲಿ, ತಾನೊಬ್ಬ ಸಂಸಾರವಂದಿಗ ಎಂಬುದನ್ನು ಮರೆಯದೆ, ನಮಗೂ ಮರವೆಯಾಗದಂತೆ ಮಾಡುತ್ತಾರೆ. ಇದು ಬರೀ ತನ್ನ ಮಿತಿಗಳನ್ನು ಒಪ್ಪಿಕೊಳ್ಳುವ ಮಾತಲ್ಲ. ಅವರ ಸಾಹಿತ್ಯ ವಿಮರ್ಶೆಯಲ್ಲಿ ಇದು ಮೂಲಾಧಾರವಾಗಿರುವಂಥದ್ದು. ಜೀವನದಲ್ಲಾಗಲೀ, ಬರವಣಿಗೆಯಲ್ಲಾಗಲೀ ಯಾವುದೂ ಎಷ್ಟು ಅರಗುತ್ತದೆ, ಎಷ್ಟು ಕರಗತವಾಗುತ್ತದೆ ಅಷ್ಟು ಮಾತ್ರ ನಿಜ ಎಂಬ ನಿಷ್ಠುರ ನಿಲವು..." ಈ ಮಾತುಗಳು ಅನಂತಮೂರ್ತಿಯವರ ಅನಂತತೆಯನ್ನು ಪರಿಚಯಿಸುತ್ತವೆ. ಒಟ್ಟಿನಲ್ಲಿ ಅನಂತಮೂರ್ತಿಯವರ ಮಾತಿನಲ್ಲಿ, ವಿಮರ್ಶೆಗಳಲ್ಲಿ, ಕತೆ–ಕಾದಂಬರಿಗಳಲಿ, ಕವಿತೆಗಳಲ್ಲಿ, ಭಾಷಣಗಳಲ್ಲಿ ತನ್ನದೇ ಆದ ವಿಶಿಷ್ಟ ವ್ಯಕ್ತಿತ್ವದ ಛಾಪು ಇರುತ್ತದೆ. ಇದು ಅನಂತಮೂರ್ತಿಯವರ ವೈಶಿಷ್ಟ್ಯತೆ.

**ಆಕಾರ ಗ್ರಂಥಗಳು**

1. ಯು. ಆರ್. ಅನಂತಮೂರ್ತಿ – ಸಂಸ್ಕಾರ ಅಕ್ಷರ ಪ್ರಕಾಶನ ಹೆಗ್ಗೋಡು – 1965
2. ಯು. ಆರ್. ಅನಂತಮೂರ್ತಿ – ಭಾರತೀಪುರ ಅಕ್ಷರ ಪ್ರಕಾಶನ ಹೆಗ್ಗೋಡು – 1973
3. ಯು. ಆರ್. ಅನಂತಮೂರ್ತಿ – ಅವಸ್ಥೆ ಅಕ್ಷರ ಪ್ರಕಾಶನ ಹೆಗ್ಗೋಡು – 1978
4. ಯು. ಆರ್. ಅನಂತಮೂರ್ತಿ – ಭವ ಅಕ್ಷರ ಪ್ರಕಾಶನ ಹೆಗ್ಗೋಡು – 1994